# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 116/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಚಂದ್ರಶೇಖರ್ | *ಪ್ರಮಾಣ ಮಾಡಿಸಿದ ದಿನಾಂಕಃ* | |
| ತಂದೆ/ಗಂಡನ ಹೆಸರು | ಃ ಶ್ರೀ ಜಿ.ನಾಗಪ್ಪ | **28.02.2024** | |
| ವಯಸ್ಸು | ಃ 86 ವರ್ಷ | | |
| ವೃತ್ತಿ | ಃ ವ್ಯಾಪಾರ | ಪ್ರಾ.ಸಾ. | ಃ 17 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನಗೆ ಈ ಪ್ರಕರಣದ ಪಿರ್ಯಾದಿದಾರರು ಮತ್ತು ಆರೋಪಿತರ ಪರಿಚಯ ಇಲ್ಲ. ಈ ಪ್ರಕರಣದ ಆರೋಪಿತರ ಮತ್ತು ಮೃತ ಬಾಬು ನನ್ನ ಅಂಗಡಿಗೆ ಯಾವತ್ತು ಬಂದಿಲ್ಲ. ಈ ಪ್ರಕರಣದ ಆರೋಪಿತರಾದ ಪವನ್, ಪ್ರೇಮ್, ಪ್ರಜ್ವಲ್, ಮನೋಜ್ ಮತ್ತು ಇತರರು ನನ್ನ ಅಂಗಡಿಯ ಬಳಿ ಬಂದು ಆ ಕಾಲಕ್ಕೆ ನನ್ನ ಅಂಗಡಿಯಲ್ಲಿ ಸಿಗರೇಟ್ ಖರೀದಿಸಿ ಸೇದುತ್ತಾ ಹೊಗುತ್ತಿದ್ದ ಬಾಬುರವರ ಬಳಿ ಜಗಳ ಮಾಡಿ ಅವರಿಗೆ ಹೊಡೆದಿದ್ದನ್ನು ನಾನು ನೋಡಿಲ್ಲ ಮತ್ತು ಆ ರೀತಿ ಹೊಡೆದ ಬಗ್ಗೆ ನಾನು ಪೋಲೀಸರು ಮುಂದೆ ಹೇಳಿಕೆ ಕೊಟ್ಟಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ದಿಃ*11.02.2019* ರಂದು ರಾತ್ರಿ *10.15* ರಿಂದ *10.30* ರ ವೇಳೆಯಲ್ಲಿ ನಾನು ಅಂಗಡಿಯಲ್ಲಿದ್ದಾಗ ನನ್ನ ಅಂಗಡಿಗೆ ಆಗಾಗ ಬರುತ್ತಿದ್ದ ಈ ಪ್ರಕರಣದ ಆರೋಪಿತರಾದ ಪಾಳ್ಯದ

ಪವನ್, ಪ್ರೇಮ್, ಪ್ರಜ್ಞು, ಮನೋಜ್, ಜೀವನ್, ಅವಿ, ಮದನ್, ಮುತ್ತು ಆದಿ, ಸುಮಂತ್ ಮತ್ತು ರೂಪೇಶ್ ಇವರು ನನ್ನ ಅಂಗಡಿ ಮುಂಭಾಗದ ರಸ್ತೆ ಬಳಿ ಬಂದಿದ್ದರು ಮತ್ತು ಆ ಕಾಲಕ್ಕೆ ಪವನ್ ಕೈಯಲ್ಲಿ ಚಾಕು ಮತ್ತು ಪ್ರೇಮ್ ಕೈಯಲ್ಲಿ ಬಿಯರ್ ಬಾಟಲ್ ಇತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಆ ಎಲ್ಲಾ ಆರೋಪಿತರು ನಮ್ಮ ಅಂಗಡಿಯಿಂದ ಸಿಗರೇಟ್ ತೆಗೆದುಕೊಂಡು ಹೊಗುತ್ತಿದ್ದ ಬಾಬುರವರನ್ನು ನೋಡಿ ಅಡ್ಡ ಹಾಕಿ ಪವನ್, ಪ್ರೇಮ್, ಪ್ರಜ್ಞು ಇವರು ಹೊಡೆದಿದ್ದರು ಎಂದರೆ ಸರಿಯಲ್ಲ. ಆಗ ನಾನು ಭಯಗೊಂಡು ಅಂಗಡಿ ಬಾಗಿಲು ಹಾಕಿಕೊಂಡು ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಂತರ ಆ ಎಲ್ಲಾ ಆರೋಪಿತರು ಸೇರಿ ಬಾಬು ಇವರನ್ನು ಕೊಲೆ ಮಾಡಿದ್ದಾರೆ ಎಂದು ಮರುದಿನ ಬೆಳಗ್ಗೆ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ–*24* ಎಂದು ಗುರುತಿಸಿದೆ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ</u>

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು